U/S 14/9/2021

# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 263
2. ಸದಸ್ಯರ ಹೆಸರು : ಶ್ರೀ ವಿಜಯ್‌ಸಿಂಗ್
3. ಉತ್ತರಿಸಬೇಕಾದ ದಿನಾಂಕ : 14.09.2021
4. ಉತ್ತರಿಸುವ ಸಚಿವರು : ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು

| ಕ್ರ. ಸಂ | ಪ್ರಶ್ನೆ |
|---|---|
| (ಅ) | ಕಳೆದ 2021-2022ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಕಬ್ಬು ಬೆಳೆಗಾರರು ತೀವ್ರ ಸಂಕಷ್ಟದಲ್ಲಿದ್ದು, ಸಕ್ಕರೆ ಕಾರ್ಖಾನೆಗಳಿಗೆ ಸರಬರಾಜು ಮಾಡಿದ ಕಬ್ಬಿಗೆ ಜಿಲ್ಲಾಡಳಿತ ನಿಗದಿಗೊಳಿಸಿದ ಹಣ ಈವರೆವಿಗೂ ಪಾವತಿ ಆಗದಿರಲು ಕಾರಣಗಳೇನು; |
| (ಆ) | ಒಂದು ಟನ್ ಕಬ್ಬಿಗೆ ರೂ.2,400/- ನಿಗದಿಯಾಗಿದ್ದು, ಹಲವು ಕಾರ್ಖಾನೆಗಳು ಕೇವಲ ರೂ.1,950/- ಹಣವನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; |

## ಉತ್ತರ

ಕೇಂದ್ರ ಸರ್ಕಾರದ ಆಹಾರ ಮತ್ತು ಸಾರ್ವಜನಿಕ ವಿತರಣೆ ಇಲಾಖೆಯ ಪತ್ರ ಸಂಖ್ಯೆ: NO.3(1)2019-SP-I ದಿನಾಂಕ: 26.08.2020ರಲ್ಲಿ 2020-21ನೇ ಸಾಲಿನಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಸರಬರಾಜಾಗುವ ಕಬ್ಬಿಗೆ ಮೊದಲನೇ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು (ಎಫ್.ಆರ್.ಪಿ) ಘೋಷಿಸಲಾಗಿದೆ. ಶೇ.9.5 ಮತ್ತು ಅದಕ್ಕಿಂತ ಕಡಿಮೆ ಇಳುವರಿ ಹೊಂದಿರುವ ಕಾರ್ಖಾನೆಗಳಿಗೆ ಪ್ರತಿ ಮೆ. ಟನ್‌ಗೆ ರೂ.2708/- ಹಾಗೂ ಶೇ.10 ರಷ್ಟು ಸಕ್ಕರೆ ಇಳುವರಿಗೆ ಪ್ರತಿ ಮೆ. ಟನ್ ಒಂದಕ್ಕೆ ರೂ.2850/- ಗಳನ್ನು ನಿಗದಿಪಡಿಸಿದೆ. ಶೇ.10 ರ ನಂತರದ ಪ್ರತಿ ಶೇ.1 ರಷ್ಟು ಇಳುವರಿಗೆ ಪ್ರತಿ ಮೆ. ಟನ್ ಒಂದಕ್ಕೆ ರೂ.285/-ರಂತೆ ಹೆಚ್ಚುವರಿ ಬೆಲೆಯನ್ನು ಸದರಿ ಪತ್ರದಲ್ಲಿ ನಿಗದಿಗೊಳಿಸಲಾಗಿದೆ.

ಈ ಪತ್ರದಲ್ಲಿ ನಿಗದಿಪಡಿಸಿದ ಮಾನದಂಡಗಳ ಆಧಾರದ ಮೇಲೆ 2020-21ನೇ ಹಂಗಾಮಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ನುರಿಸುವ ಪ್ರತಿ ಮೆ. ಟನ್ ಕಬ್ಬಿಗೆ ರೈತರಿಗೆ ಪಾವತಿಸಬೇಕಾದ ಎಫ್.ಆರ್.ಪಿ. ದರವನ್ನು ನಿಗದಿಗೊಳಿಸಿ, ಆದೇಶ ಸಂಖ್ಯೆ: ಡಿಎಸ್‌ಕೆ/ಎಸ್‌ಕೆ/19/2020-21, ದಿನಾಂಕ: 02.11.2020ರಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಆದೇಶ ಹೊರಡಿಸಿರುತ್ತಾರೆ.

ಬೀದರ್ ಜಿಲ್ಲೆಯಲ್ಲಿ 2020-21ನೇ ಸಾಲಿನಲ್ಲಿ ಸಹಕಾರಿ ವಲಯದ 2 ಹಾಗೂ ಖಾಸಗಿ ವಲಯದ 2 ಹೀಗೆ ಒಟ್ಟು 4 ಸಕ್ಕರೆ ಕಾರ್ಖಾನೆಗಳು ಕಾರ್ಯ ನಿರ್ವಹಿಸಿರುತ್ತವೆ. ಈ ಕಾರ್ಖಾನೆಗಳಿಗೆ ಪ್ರತಿ ಟನ್ ಒಂದಕ್ಕೆ ನಿಗದಿಪಡಿಸಿರುವ ಎಫ್.ಆರ್.ಪಿ. ದರ, ಕಾರ್ಖಾನೆಗಳು ನುರಿಸಿದ ಕಬ್ಬಿಗೆ ಪಾವತಿಸಬೇಕಾದ ಕಬ್ಬು ಬಿಲ್ಲು ಮೊತ್ತ, ಪಾವತಿಸಿದ ಮೊತ್ತ ಮತ್ತು ಬಾಕಿ ಮೊತ್ತದ ವಿವರಗಳು ದಿನಾಂಕ 31.08.2021ರ ಅಂತ್ಯಕ್ಕೆ ಈ ಕೆಳಕಂಡಂತೆ ಇರುತ್ತವೆ.*(ರೂ.ಲಕ್ಷಗಳಲ್ಲಿ)*

| ಕ್ರ. ಸಂ | ಕಾರ್ಖಾನೆಯ ಹೆಸರು | ನಿಗದಿಪಡಿಸಿದ ಎಫ್.ಆರ್.ಪಿ. ದರ ಪ್ರತಿ ಮೆ. ಟನ್ ಒಂದಕ್ಕೆ | ಪಾವತಿಸಬೇಕಾದ ಮೊತ್ತ | ಪಾವತಿಸಿ-ರುವ ಮೊತ್ತ | ಬಾಕಿ ಮೊತ್ತ |
|---|---|---|---|---|---|
| 1. | ಭಾಲ್ಕೇಶ್ವರ ಶುಗರ್ಸ್ ಲಿ., ಬಾಜೋಳಗ, ಭಾಲ್ಕಿ ತಾಲ್ಲೂಕು, ಬೀದರ್‌ಜಿಲ್ಲೆ | 2708 | 11419 | 11419 | 0 |
| 2 | ಬೀದರ್ ಕಿಸಾನ್ ಶಕ್ಕರ್ ಕಾರ್ಖಾನಾ ಲಿ., ಮೊಗ್ಯಾಲ್ ಗ್ರಾಮ, ಬೀದರ್ ತಾಲ್ಲೂಕು ಮತ್ತು ಜಿಲ್ಲೆ | 2708 | 6012 | 5803 | 209 |
| 3. | ಮಹಾತ್ಮ ಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಭಾಲ್ಕಿ ತಾಲ್ಲೂಕು ಬೀದರ್ ಜಿಲ್ಲೆ. | 2708 | 8753 | 8753 | 0 |
| 4 | ನಾರಂಜಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಇಮಾಂಪುರ್, ಬೀದರ್ ಜಿಲ್ಲೆ | 2708 | 6844 | 6844 | 0 |

.......2

| | | |
|---|---|---|
| (ಇ) | ಜಿಲ್ಲೆಯ ಕೆಲ ಕಾರ್ಖಾನೆಗಳು ಕಬ್ಬು ಪೂರೈಸಿದ ರೈತರಿಗೆ ಬಾಕಿ ಉಳಿಸಿಕೊಂಡಿರುವ ಹಣ ಎಷ್ಟು; ಎಷ್ಟು ಕಾರ್ಖಾನೆಗಳು ಹಣ ಪಾವತಿ ಮಾಡಿರುವುದಿಲ್ಲ? (ಸಂಪೂರ್ಣ ವಿವರ ನೀಡುವುದು) | ಬೀದರ್ ಜಿಲ್ಲೆಯ 3 ಸಕ್ಕರೆ ಕಾರ್ಖಾನೆಗಳು ಸರ್ಕಾರವು ನಿಗದಿಪಡಿಸಿರುವ ಎಫ್.ಆರ್.ಪಿ. ದರದಂತೆ ಕಬ್ಬು ಬಿಲ್ಲು ಮೊತ್ತವನ್ನು ಪೂರ್ಣವಾಗಿ ಪಾವತಿಸಿರುತ್ತವೆ. ಬೀದರ್ ಕಿಸಾನ್ ಶಕ್ಕರ್ ಕಾರ್ಖಾನಾ ಲಿ. ಈ ಕಾರ್ಖಾನೆಯು ದಿನಾಂಕ 31.08.2021ರ ಅಂತ್ಯಕ್ಕೆ 2.09 ಕೋಟಿಗಳಷ್ಟು ಮೊತ್ತವನ್ನು ಪಾವತಿಸಲು ಬಾಕಿ ಉಳಿಸಿಕೊಂಡಿರುತ್ತದೆ.<br>ಸದರಿ ಮೊತ್ತದ ವಸೂಲಾತಿಗಾಗಿ ದಿನಾಂಕ 02.02.2021 ಮತ್ತು 18.06.2021 ರಂದು ಶಾಸನಬದ್ಧ ನೋಟೀಸ್‌ಗಳನ್ನು ಜಾರಿಗೊಳಿಸಲಾಗಿದೆ. ಆದಾಗ್ಯೂ, ಈ ಕಾರ್ಖಾನೆಯು ಬಾಕಿ ಮೊತ್ತ ಪಾವತಿಸದೇ ಇದ್ದಲ್ಲಿ, ಕಬ್ಬು (ನಿಯಂತ್ರಣ) ಆದೇಶ, 1966 ರ ಅವಕಾಶಗಳ ರೀತ್ಯಾ ವಸೂಲಾತಿಗೆ ಕ್ರಮವಹಿಸಲಾಗುವುದು.<br>ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಎಫ್.ಆರ್.ಪಿ. ದರವು ಕಬ್ಬು ಕಟಾವು ಮತ್ತು ಸಾಗಾಣಿಕೆ ದರಗಳನ್ನು ಸಹ ಒಳಗೊಂಡಿರುತ್ತದೆ. ಬೀದರ್ ಜಿಲ್ಲೆಯ 4 ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ಪ್ರತಿ ಮೆ. ಟನ್‌ಒಂದಕ್ಕೆ ಕಬ್ಬು ಬಿಲ್ಲು ಮೊತ್ತ ರೂ.1950/- ಎಂದು ಹಾಗೂ ಕಬ್ಬು ಕಟಾವು ಮತ್ತು ಸಾಗಾಣಿಕೆ ದರ ರೂ.758/- ರಂತೆ ಪಾವತಿಸಿರುತ್ತವೆ.<br>ಕೇಂದ್ರ ಸರ್ಕಾರವು ಕಬ್ಬಿಗೆ ಎಫ್.ಆರ್.ಪಿ ನಿಗದಿಪಡಿಸುವುದರಿಂದ ಜಿಲ್ಲಾಡಳಿತವು ಕಬ್ಬಿಗೆ ದರ ನಿಗದಿಪಡಿಸಲು ಅವಕಾಶವಿರುವುದಿಲ್ಲ. ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಎಫ್.ಆರ್.ಪಿ. ದರದಂತೆ ಸಕ್ಕರೆ ಕಾರ್ಖಾನೆಗಳು ಕಬ್ಬಿನ ಬಿಲ್ಲನ್ನು ರೈತರಿಗೆ ಸಂದಾಯ ಮಾಡುತ್ತಿವೆ. |

ಸಂಖ್ಯೆ: ಸಿಐ 81 ಸಿಓಎಫ್ 2021

(ಶಂಕರ್.ಬಿ.ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು.